
ಅತಿ ಸಣ್ಣಕತೆ

ಮೊಗಳ್ಳಿ ಗಣೇಶ್



ಚಿತ್ರಗಳು: ಸೃಜನ್

# ಪಾತರಗಿತ್ತಿಯಿಂದಲೇ ನನ್ನ ಮುಕ್ತಿ

ಅದೊಂದು ಕಂಬಳಿ ಹುಳ. ಆದಕೆ ಬಿಡುವೇ, ಕಾಲವೇ ಇಲ್ಲ. ಇರುವಷ್ಟರಲ್ಲಿ ಎಷ್ಟು ತಿನ್ನಲು ಸಾಧ್ಯವೊ ಅಷ್ಟೆಲ್ಲವನ್ನೂ ತಿಂದು ಬಿಡಬೇಕು ಎಂದು ಚಿಗುರೆಲೆಗಳನೆಲ್ಲ ಮೇಯುತ್ತಿತ್ತು. ಆಹಾ, ದೇವರೇ ತಾನು ಬರಿದೇ ತಿನ್ನುವ ಒಂದು ಹುಳವೇ ಎಂದು ತಿಂದದ್ದೆಲ್ಲ ವ್ಯರ್ಥ ಎನಿಸಿದಾಗ ಅದರ ಕೊಬ್ಬಿದ ದೇಹವೇ ಮುರುಟಿ ಕೊಂಬೆ ಒಂದಕ್ಕೆ ಅಂಟಿಕೊಂಡಿತು. ಅದರ ಆತ್ಮಕ್ಕೆ ಎಚ್ಚರವಾಗಿ ಹುಳದ ಜೀವದ ಉಸಿರಾಟವ ತಾನೇ ಮುಂದುವರಿಸಿತು. ದೇಹ ಮತ್ತು ಆತ್ಮಗಳು ರೂಪಾಂತರಗೊಂಡಿದ್ದವು. ದೇಹದ ಆಸೆ ಮತ್ತು ಆತ್ಮದ ಮೋಹದ ಪಲ್ಲಟಗಳೂ ಹಾಗೆಯೇ ಇರಬಹುದು.

ದಿನಗಳು ಅರಳಿ ಆ ಹುಳದ ಆತ್ಮಕ್ಕೆ ರೆಕ್ಕೆ ಬಂದು ಹಾರಾಡುವ ತವಕದಲಿ ಹೊರಬಂದ ಕೂಡಲೆ ಅದಕೆ ಮಿಲನದ ಜಾತ್ರೆಯ ಎಲ್ಲ ರಂಗೂ ಮೈ ತುಂಬ ಅಡರಿ ಮೆತ್ತಿಕೊಂಡು ಬಣ್ಣದ ಚಿಟ್ಟೆಯಾಗಿ ಓಕುಳಿಯ ಅಮಲಿನಲಿ ಮಕರಂದದ ಸಂಭ್ರಮದಲ್ಲಿ ಎಲ್ಲೆಡೆ ಹಾರಾಡಿತು.

ಆಹಾ ಮೋಹ ಜೀವದ ಚಿಟ್ಟೆಯೇ; ಮಿಲನವೇ ನಿನ್ನ ವಿಮೋಚನೆಯೇ ; ಹಾಗಾದರೆ; ಬಾ... ಬಾ... ಬಣ್ಣ ಬಣ್ಣದ ಈ ಬೆಡಗಿನ ಪಾತರಗಿತ್ತಿಯರಲ್ಲಿ ಯಾರನ್ನು ಗೆದ್ದುಕೊಳ್ಳುವೆಯೊ ಗೆದ್ದುಕೊ; ಕೂಡಿಕೊ; ಜೀವ ಸೇರಿಕೊ; ನಿಸರ್ಗದ ಅನಂತ ಜಾತ್ರೆಯ ಆಕಾಶದಲ್ಲಿ ನಿನ್ನ ಗುರುತನ್ನು ಉಳಿಸಿಕೊ ಎಂದು ಮೋಹ ಚಿಟ್ಟೆಗೆ ಚಿಟ್ಟೆಯ ಬೆಡಗನ್ನು ಹದ ಮಾಡಿತು. ಮಿಲನವೇ ಮುಕ್ತಿಯೇ, ವೈರಾಗ್ಯವೇ ಮುಕ್ತಿಯೇ... ಅವುಗಳಾಚೆಗೇನಿದೆ ಕಾಮನೆಯ ಭೃಂಗದ ಅಲೆಗಳು ಎಂದು ಚಿಟ್ಟೆಯು ಇನ್ನು ತನ್ನ ರೆಕ್ಕೆಗಳು ಪಟಪಟಿಸಲಾರವು ಎಂದು ಹಸಿರು ಬೇಲಿಯಲಿ ಕುಳಿತು ನಾಳೆಯಾಚೆಯ ಲೋಕದ ಪಾತರಗಿತ್ತಿಯ ಪಾಡು ಏನೆಂದು ವಿರಹದಲ್ಲಿ ಧ್ಯಾನಿಸುತ್ತಲೇ ನಿಸ್ತೇಜವಾಗಿ ಮಳೆಗಾಳಿಯಲಿ ಲಯವಾಗಿತ್ತು.

ಮತ್ತದೇ ಕಂಬಳಿ ಹುಳ ಮೊಟ್ಟೆಯೊಡೆದು ಜೀವಜಾಲದಲಿ ಮತ್ತೆ ಚಿಟ್ಟೆಯಾಗಿ ಪಾತರಗಿತ್ತಿಯ ಮೂಲಕವೇ ತನಗೆ ಮುಕ್ತಿ ಎಂದು ನಾಳಿನ ಕನಸಲ್ಲಿ ತನ್ನ ಕವಚದ ಗೂಡು ಕಟ್ಟಿಕೊಳ್ಳುತ್ತಿತ್ತು.

❖